

## ಸಾಮಾಜಿಕ ಕಾಳಜಿ

ಇವೆಲ್ಲವುದರ ಜೊತೆಗೆ ಮನೆ ಕಟ್ಟುವಾಗ ಸಾಮಾಜಿಕ ಕಾಳಜಿಯೂ ಇರಲಿ. ಅಕ್ಕಪಕ್ಕದವರಿಗೆ ವಿನಾಕಾರಣ ತೊಂದರೆಯಾಗದಂತೆ ನೋಡಿಕೊಳ್ಳಿ. ನಮ್ಮ ಕೆಲಸದಿಂದ ಪಕ್ಕದ ಮನೆಗೆ ಹಾನಿಯಾಗದಂತೆ ಟಾರ್ಪಾಲಿನಿಂದ ಮುಚ್ಚುವುದು, ಮನೆಯಲ್ಲಿ ಮಕ್ಕಳು ಮುದುಕರು ಇದ್ದರೆ ರಾತ್ರಿವೇಳೆ ಕೆಲಸ ಮಾಡದಿರುವುದು, ರಸ್ತೆಯ ಮೇಲೆ ಸಾಮಾನುಗಳನ್ನು ಸುರಿಯದಿರುವುದು, ರಸ್ತೆ ಬದಿಯ ಚರಂಡಿಯನ್ನು ಬ್ಲಾಕ್ ಮಾಡದೆ ಸರಾಗವಾಗಿ ನೀರು ಹರಿಯುವಂತೆ ನೋಡಿಕೊಳ್ಳುವುದು ಇತ್ಯಾದಿಗಳೆಲ್ಲ ಕನಿಷ್ಠ ಕಾಳಜಿಯ ಕೆಲಸಗಳು. ತುಸು ದಿನಗಳ ನಂತರ ಅದೇ ಬೀದಿಯಲ್ಲಿ, ಅದೇ ನೆರೆಹೊರೆಯೊಡನೆ ನೀವೂ ಸಹಬಾಳ್ವೆ ಮಾಡಬೇಕೆಂಬುದನ್ನು ಮರೆಯದಿರಿ.

ಕಟ್ಟಡ ಕಾಮಗಾರಿಯಿಂದ ಸಾಕಷ್ಟು ನಿರುಪಯುಕ್ತ ವಸ್ತು, ತಾಜ್ಯ, ತುಂಡುಕಡಿಗಳು (ಡಬ್ರೀಸ್) ಹೊರಬರುತ್ತವೆ. ಅವನ್ನು ದೂರ ಸಾಗಹಾಕುವುದೂ ಒಂದು ಖರ್ಚೇ. ಅವುಗಳನ್ನು ಸರ್ಕಾರ ನಿಗದಿಪಡಿಸಿದ ಜಾಗದಲ್ಲೇ ಬಿಸಾಕಿ. ಯಾವುದೋ ಯಾರದೋ ಖಾಲಿ ಜಾಗದಲ್ಲಿ ಹಾಕಬೇಡಿ. ಕಾಮಗಾರಿಯಲ್ಲಿ ನೀರನ್ನು ಮಿತವಾಗಿ ಬಳಸುವುದು, ಸೈಟಿನ ಎದುರು ಮರ–ಗಿಡಗಳಿದ್ದರೆ ಅವುಗಳನ್ನು ಸಾಧ್ಯವಾದಷ್ಟೂ ಉಳಿಸಿಕೊಳ್ಳಲು ಪ್ರಯತ್ನಿಸುವುದು ಇತ್ಯಾದಿಗಳೆಲ್ಲ ನೀವು ಸಮಾಜದೆಡೆಗೆ ತೋರುವ ಕಳಕಳಿಯೇ ಆಗಿದೆ.

ಗ್ರಾನೈಟ್, ಮಾರ್ಬಲ್... ಹೀಗೆ ನಿಮ್ಮ ಅಭಿರುಚಿ ಹಾಗೂ ಬಜೆಟ್ಟಿಗೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಿ. ಟೈಲುಗಳ ತುದಿ ಅಥವಾ ಅಂಚು ಮುರಿಯದಿರುವುದು, ಕಚ್ಚಾಗದಿರುವುದು ಒಳ್ಳೆಯ ಗುಣಮಟ್ಟದ ಲಕ್ಷಣ. ಟೈಲುಗಳನ್ನು ತುಂಡರಿಸುವ ಆವಶ್ಯಕತೆ ಬಂದಾಗ ಟೈಲ್‌ಕಟರ್‌ಗಳನ್ನೇ ಬಳಸಿ. ಇವುಗಳನ್ನು ಹಾಸಿಯಾದಮೇಲೆ ಅದರ ಜಾಯಿಂಟುಗಳು ಸರಿಯಾಗಿ ಹೊಂದಿಕೊಂಡು ನಡುವಿನ ಸಣ್ಣ ಅಂತರ ಸಿಮೆಂಟಿನಿಂದ ತುಂಬಲಿ. ಟೈಲು/ ಗ್ರಾನೈಟು ಹಾಸಿಗೂ ಕ್ಯೂರಿಂಗ್ ಅತ್ಯಗತ್ಯ.

ಪೇಂಟಿಂಗು ಮನೆಯ ಅಂದ ಹೆಚ್ಚಿಸುತ್ತದೆ ಎಂಬುದು ದಿಟವಾದರೂ ಅದು ಗೋಡೆಗೆ ಒಂದು ಸುರಕ್ಷಿತ ಪದರವಾಗಿಯೂ ಕೆಲಸ ಮಾಡುತ್ತದೆ. ಹೀಗಾಗಿ ಬಣ್ಣ ಬಳಿಯುವಾಗ ಅದನ್ನು ಮಾಡಬೇಕಾದ ಕ್ರಮದಲ್ಲೇ ಮಾಡಬೇಕು. ಮೊದಲನೆಯದಾಗಿ, ಗೋಡೆ ಪೂರ್ಣವಾಗಿ ಒಣಗಿ ಯಾವುದೇ ಕಲ್ಮಶಗಳಿಂದ ಮುಕ್ತವಾಗಿರಬೇಕು. ಗೋಡೆಯಲ್ಲಿ ಯಾವುದೇ ಬಿರುಕು ಕಂಡುಬಂದರೆ ಅದನ್ನು ರಿಪೇರಿ ಮಾಡಿಯೇ ಬಣ್ಣದ ಕೆಲಸ ಶುರು ಮಾಡಿ. ಮೊದಲ ಹಂತವಾಗಿ ಒಂದು ಅಥವಾ ಎರಡು ಸುತ್ತಿನ ಪ್ರೈಮರ್ ಹೊಡೆದು, ಅದು ಒಣಗಿದ ನಂತರ ಒಳ್ಳೆಯ ಕ್ವಾಲಿಟಿಯ ಪುಟ್ಟಿ (ಪಟ್ಟಿ) ಲೇಪಿಸಬೇಕು. ಅದನ್ನು ಉಜ್ಜಿ ಇಡೀ ಗೋಡೆ ನುಣುಪಾಗಿ ಸಮತಳ ಕಂಡುಕೊಂಡ ಮೇಲೆ ಎರಡುಮೂರು ಸುತ್ತಿನ ಪೇಂಟಿಂಗ್ ಮಾಡಿಸಿ. ಆದಷ್ಟು ಲಘು ಬಣ್ಣಗಳನ್ನು ಒಳಗೋಡೆಗಳಿಗೆ ಬಳಸುವುದರಿಂದ ಬೆಳಕಿನ ಪ್ರತಿಫಲನ ಹೆಚ್ಚುತ್ತದೆ.

ಬಣ್ಣ ಬಳಿಯುವುದು ಕಟ್ಟಡ ಕಾಮಗಾರಿಯ ಕೊನೆಯ ಹಂತದ ಕೆಲಸವಾಗಿರುತ್ತದೆ. ಹೀಗಾಗಿ ಅದನ್ನು ಶುರುಮಾಡುವ ಮೊದಲು ಹೆಚ್ಚಿನ ಎಲ್ಲ ಕೆಲಸಗಳೂ ಮುಗಿದಿರಲಿ. (ಒಳವಿನ್ಯಾಸ – ಇಂಟೀರಿಯರ್ ಡೆಕೋರೇಶನ್ ಕೆಲಸ ಹೊರತುಪಡಿಸಿ) ಮನೆ ಹೊರಗಿನ ಕೆಲಸವಾದ ಕಾಂಪೌಂಡ್ ಗೋಡೆ, ಗೇಟು, ಮಳೆ ನೀರಿನ ಇಂಗುಗುಂಡಿ ಇತ್ಯಾದಿ ಕೆಲಸಗಳು ಮುಗಿದ ನಂತರವೇ ಬಣ್ಣದ ಕೆಲಸ ಶುರುಮಾಡಿ. ಅಂದಹಾಗೆ, ಮನೆಯ ವಿದ್ಯುತ್ ಸಂಪರ್ಕ, ಸ್ಯಾನಿಟರಿ ಸಂಪರ್ಕ ಇವುಗಳಿಗೆಲ್ಲ ಸರ್ಕಾರದ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆಯಲು ಸಾಕಷ್ಟು ಸಮಯ ಹಿಡಿಯಬಹುದು. ಹೀಗಾಗಿ ಆ ಕೆಲಸಗಳನ್ನು ಕೊನೆಯಲ್ಲಿ ಇಟ್ಟುಕೊಳ್ಳದೇ ಪ್ರಕ್ರಿಯೆಯನ್ನು ಸಾಕಷ್ಟು ಮೊದಲೇ ಆರಂಭಿಸಿ.

ಮನೆ ಕಟ್ಟುವ ಕಾರ್ಯವಿಧಾನದ ಎಲ್ಲ ವಿಷಯಗಳೂ ಎಲ್ಲರಿಗೂ ತಿಳಿಯಬೇಕೆಂದೇನಿಲ್ಲ. ಈ ಲೇಖನ ಕೂಡಾ ಸಂಕ್ಷಿಪ್ತವಾಗಿ ಮಾಹಿತಿ ಒದಗಿಸಬಲ್ಲದೇ ಹೊರತೂ ಸಮಗ್ರವಾಗಲ್ಲ. ಹೀಗಾಗಿ ಯಾವುದೇ ಸಮಯದಲ್ಲೂ ಅಗತ್ಯವೆನಿಸಿದಾಗ ಕ್ಷೇತ್ರ ಪರಿಣತರ ಸಲಹೆ ಪಡೆಯಿರಿ. ವಿಶ್ವಾಸದಿಂದ ಮನೆ ಕಟ್ಟುವ ಪ್ರಕ್ರಿಯೆ ಆರಂಭಿಸಿ. ನಿಮ್ಮದೇ ಜಾಗದಲ್ಲಿ ಸ್ವಂತ ಸೂರೊಂದನ್ನು ಹೊಂದುವ ಕನಸು ನನಸಾಗಲಿ; ಅದೂ ಸರಾಗವಾಗಿ.

**(ಹೆಚ್ಚಿನ ಮಾಹಿತಿಗಾಗಿ ಲೇಖಕರ ದೂರವಾಣಿ ಸಂಖ್ಯೆ: 97311 09144)**

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in